ಒಂದಾಣೆ ಮಾಲೆ 200

ಮಾಯಾವಿನಿ

ಅಥವಾ

ಶೂರ್ಪಣಖಾ ಮಾನಭಂಗ

(ಏಕಾಂಕ ನಾಟಕ)

(ಮೈಥಿಲೀ ಶರಣರ ಖಂಡಕಾವ್ಯ "ಸಂಚವಟಿ"ಯ ಆಧಾರದಿಂದ)

❋

ರಚಯಿತರು:
ವಿದ್ವಾನ್ ಎಂ. ಗೋಪಾಲಕೃಷ್ಣ ಭಟ್ಟ,
ಎಡನಾಡು, ಕುಂಬಳೆ.

❋

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

ಒಂದಾಣೆ ಮಾಲೆಯಲ್ಲಿ
ಈ ವರೆಗೆ ಪ್ರಕಟವಾದ
ನಲ್ವತ್ತಾರು ಏಕಾಂಕ ನಾಟಕಗಳು

ಪ್ರತಿಯೊಂದಕ್ಕೆ ಒಂದಾಣೆ. **ಪುಟಗಳು: 16 + 4.**

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ದಿ। ಎಮ್. ಎನ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ। ಬಿ. ದಾಮೋದರ ಬಾಳಿಗ, ಬಿ. ಎ.
೭	ವೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ। ಎಸ್. ಪಿ. ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.

(ಪುಟ 17ಕ್ಕೆ ಮುಂದುವರಿದಿದೆ)

ಮಾಯಾವಿನಿ

ಅಥವಾ

ಶೂರ್ಪಣಖಾ ಮಾನಭಂಗ

(ಏಕಾಂಕ ನಾಟಕ)

ಪಾತ್ರಗಳು:— ೧. ರಾಮ. ೨. ಲಕ್ಷ್ಮಣ.
೩. ಸೀತೆ. ೪. ಶೂರ್ಪಣಖೆ.

ದೃಶ್ಯ ೧

(ವನವಾಸಕ್ಕೆ ಹೊರಟ ರಾಮನನ್ನನುಸರಿಸಿ ಸೀತೆ ನಡೆದಿದ್ದಾಳೆ. ಬೆಂಬಿಡಿದ ಲಕ್ಷ್ಮಣನು ಮೆಲ್ಲಮೆಲ್ಲನೆ ಹೆಜ್ಜೆಯಿಕ್ಕುತ್ತಿದ್ದಾನೆ.)

ರಾಮ: (ಲಕ್ಷ್ಮಣನ ಕಡೆಗೆ ತಿರುಗಿ) ಲಕ್ಷ್ಮಣಾ!

ಲಕ್ಷ್ಮಣಾ: (ವಿನೀತನಾಗಿ) ಅಣ್ಣಾ!

ರಾ: ಎಷ್ಟು ಹೇಳಿದರೂ ಕೇಳದೆ ಈಕೆ, 'ಪತಿಯನ್ನನುಸರಿಸುವುದೇ ಸತಿಯ ಕರ್ತವ್ಯ'ವೆನ್ನುತ್ತ ನನ್ನೊಡನೆ ಹೊರಟಳು. ಆದರೆ, ಬಲ್ಲವನಾದ ನೀನೂ ರಾಜ್ಯದಲ್ಲಿ ನಿಲ್ಲದೆ ನನ್ನ ಬೆಂಬಿಡಿದು ಬರಬೇಕೇ?

ಲ: ನೀನಿಲ್ಲದ ಅಯೋಧ್ಯೆಯಲ್ಲಿ ಏಕೋ ನನ್ನ ಮನಸ್ಸು ನಿಲ್ಲದು ಅಣ್ಣಾ!....ನಾನು ಬಾಲ್ಯದಿಂದಲೂ ನಿನ್ನೊಡನಾಡಿದವನು. ನನ್ನ ಸರ್ವಸ್ವವಾದ ನೀನಿರುವ ಸ್ಥಳವು ಕಾಡಾದರೂ ಅದುವೇ ನನಗೆ ನಾಡು. ನೀನಿಲ್ಲದ ನಾಡು ನನಗೆ ಕಾಡು.

ಸೀತೆ: ಲಕ್ಷ್ಮಣಾ, ನಾನೊಂದು ಮಾತು ಕೇಳಲೇ?

ಲ: ಏನು ಅತ್ತಿಗೆ, ಅದು?

ಸೀ: ಇವರಾದರೋ ತಂದೆಯ ಮಾತನ್ನು ನಡೆಸುವುದಕ್ಕಾಗಿ ಎಲ್ಲವನ್ನೂ ಬಿಟ್ಟು ಬಂದರು. ಸತಿಗೆ ಪತಿಯೇ ದೈವವೆಂದು ನಾನೂ ಅನುಸರಿಸಿದೆ....ಆದರೆ, ನೀನೇಕೆ ಈ ರೀತಿ ತ್ಯಾಗಿಯಾದೆ?

ಲ: ತ್ಯಾಗಿ....?

ಸೀ: ಅಲ್ಲವೇ ಮತ್ತೆ? ಈಗ ತಾನೇ ಮನೆಗೆ ಬಂದಿರುವ ನವವಧು, ಅಕ್ಕರೆಯಿಂದ ಸಾಕಿ ಸಲಹಿದ ತಾಯಿ, ಸುಖ-ಸಂಪತ್ತನ್ನು ಎತ್ತಿ ಹಿಡಿದಿರುವ ಅಯೋಧ್ಯೆ—ಎಲ್ಲವನ್ನೂ ನೀನು ತ್ಯಜಿಸಿ ಈ ನಿರ್ಜನ ಅರಣ್ಯಕ್ಕೆ ಹೊರಟಿರುವೆಯೆನ್ನುವಾಗ, ತ್ಯಾಗಿಯೆನಿಸದೆ ಭೋಗಿಯೆನಿಸುವೆಯಾ?

ಲ: ನಿಮ್ಮ ಮಾತು ಕೇಳಿ ನನಗೆ ನಾಚಿಗೆಯಾಗುತ್ತಿದೆ ಅತ್ತಿಗೆ. ತ್ಯಾಗವೆಂದರೆ ಏನೆಂದೇ ಅರಿಯದ ನನ್ನನ್ನು ನೀವು ತ್ಯಾಗದ ಅಲಭ್ಯ ಸಿಂಹಾಸನದ ಮೇಲೆ ಏರಿಸುವುದಾದರೂ ಏಕೆ?.... ಆರ್ಯರ ಚರಣಸೇವೆಯಲ್ಲಿ ಭಾಗಿಯಾಗುವೆನೆಂದು ನಾನು ಹೊರಟಿರುವೆನಲ್ಲದೆ, ತ್ಯಾಗಿಯಾಗಿ ಅಲ್ಲ.

ರಾ: (ಮೌನ ಮುರಿದು) ಆದರೆ, ಇದುವೇ ಕರ್ತವ್ಯವಾಗಿತ್ತೇ, ತಮ್ಮಾ?

ಲ: (ಉತ್ತರಿಸಲಾರದೆ ಶಿರಬಾಗಿ) ಇಷ್ಟರ ತನಕ ಅಂತಹ ಯಾವ ಕರ್ತವ್ಯವನ್ನು ಈ ದಾಸನು ಪಾಲಿಸಿರುವನಣ್ಣಾ?

ಸೀತೆ: (ಮುಗುಳು ನಕ್ಕು) ಕರ್ತವ್ಯವೊಂದನ್ನೂ ನೀನರಿತಿಲ್ಲ. ಕೇವಲ ಪ್ರೀತಿಸುವುದಕ್ಕಷ್ಟೆ ಕಲಿತಿರುವೆ. ಅಲ್ಲವೇ ಲಕ್ಷ್ಮಣಾ?

ರಾಮ: (ನೀರು ತುಂಬಿದ ಕಣ್ಣಿನ ಪ್ರೇಮಮಯ ದೃಷ್ಟಿಯನ್ನು ಬೀರಿ) ನೀವಿಬ್ಬರೂ ನನ್ನ ಜೀವನದ ಅಕ್ಕರೆಯ ಎರಡು ರೆಕ್ಕೆಗಳು....ನನಗೇ ನಿಮ್ಮನ್ನಗಲಿರುವುದು ಕಷ್ಟಸಾಧ್ಯವಾಗಬಹುದು.... ಇರಲಿ. ಸ್ವಲ್ಪ ದೂರದಲ್ಲಿಯೇ ಪಂಚವಟಿಯಿದೆ. ಅದುವೇ ನಮ್ಮ ವನವಾಸಕ್ಕೆ ಯೋಗ್ಯವಾದ ಸ್ಥಳ! ಆದ್ದರಿಂದ ತಡಮಾಡದೆ ಅಲ್ಲಿಗೆ ನಡೆಯೋಣ.

(ಮೂವರೂ ಮುಂದೆ ನಡೆಯುವರು.)

ದೃಶ್ಯ ೨

(ಅಪರಾಹ್ನದ ಹೊತ್ತು. ರಾಮ ಪರ್ಣಕುಟಿಯಲ್ಲಿ ವಿಶ್ರಮಿಸುತ್ತಿದ್ದಾನೆ. ಸೀತೆ ಕುಟಿಯೆದುರಿನ ಕಲ್ಲಿನಲ್ಲಿ ಆಸೀನಳಾಗಿರುವಳು. ಬದಿಯಲ್ಲೇ ಇರುವ ವನಕ್ಕೆ ಹೊರಟು ನಿಂತ ಲಕ್ಷ್ಮಣ ಅವಳೊಡನೆ ಮಾತನಾಡುತ್ತಿದ್ದಾನೆ.)

ಸೀತೆ: ನಾವು ಅಯೋಧ್ಯೆಯನ್ನು ಬಿಟ್ಟು ಎಷ್ಟು ವರ್ಷಗಳಾದುವು, ಲಕ್ಷ್ಮಣಾ?

ಲಕ್ಷ್ಮಣಾ: ಇದೀಗ ಹದಿಮೂರು ವಸಂತಗಳು ಗತಿಸಿದುವು, ಅತ್ತಿಗೆ.

ಸೀ: (ಆಶ್ಚರ್ಯದಿಂದ) ಹದಿಮೂರು!

ಲ: ಹೌದು, ಹದಿಮೂರು. ಆದರೆ, ವನಕ್ಕೆ ಹೊರಟ ನಮ್ಮನ್ನು ನೋಡಿ ಪಿತನು ಮೂರ್ಛಿತನಾಗಿ ಬಿದ್ದ ಆ ದಿನವು ಇನ್ನೂ ನಿನ್ನೆಯಂತೆ ತೋರುತ್ತಿದೆಯಲ್ಲವೇ? ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಇನ್ನೂ ಹನ್ನೆರಡು ಮಾಸಗಳು ಉರುಳಿ ಹೋಗಬಹುದು.

ಸೀ: ಮತ್ತೆ ನಾವು ಅಯೋಧ್ಯೆಗೆ ಹಿಂದಿರುಗಬೇಕಲ್ಲವೇ, ಲಕ್ಷ್ಮಣಾ?

ಲ: ಹೌದು. ಹಾಗಲ್ಲವೇ ಭರತನು ಮಾತು ಪಡೆಕೊಂಡಿರುವನು?

ಸೀ: ಆದರೆ, ಅಲ್ಲಿ ಹೋದನಂತರ ಇದಕ್ಕಿಂತ ಹೆಚ್ಚಿನ ಸುಖ-ಸಂಪತ್ತು ದೊರೆಯಬಹುದೆ? ಇಲ್ಲಿ ನೋಡು—ನಾವು ಯತ್ನಪೂರ್ವಕ ಹಿಡಿದು ಪಟ್ಟಣದಲ್ಲಿ ಪಂಜರದಲ್ಲಿ ಬಂಧಿಸಿಡುವ ಪಶುಪಕ್ಷಿಗಳು, ಇಲ್ಲಿ ತಾವಾಗಿಯೇ ಬಂದು ನನ್ನನ್ನು ಮುತ್ತುತ್ತಿರುವಾಗ—ಅವುಗಳಿಗೆ ನೀವಾರವನ್ನೀಯುತ್ತಿರುವಾಗ, ನನಗೆಷ್ಟು ಸಂತೋಷವಾಗುತ್ತಿರುವುದು ಬಲ್ಲೆಯಾ? ಪಟ್ಟಣದ ಕೃತಕ ಜೀವನದಲ್ಲಿ ಇದಕ್ಕೆ ಆಸ್ಪದವಿದೆಯೇ?

ಲ: ಪ್ರಾಕೃತಿಕ ಪ್ರವೃತ್ತಿಗೂ-ಕೃತಕ ಜೀವನಕ್ಕೂ ಎಲ್ಲಿಯ ಸಾಮ್ಯ ಅತ್ತಿಗೆ? ಮುನಿಗಳ ದಿವ್ಯದರ್ಶನ, ಅವರ ಆಖ್ಯಾನಶ್ರವಣ ಇವೆಲ್ಲವೂ ನಮಗೆ ಈ ವನವಾಸವನ್ನು ನೆನಪಿಗೆ ತಾರದೆ ಉಳಿಯುವುದೆ? ಶುಭಸಿದ್ಧಾಂತ ವಾಕ್ಯಗಳನ್ನು ಓದುವ ಆಶ್ರಮದ ಶುಕಸಾರಸಗಳೂ, ವೀರರ ಪರಾಕ್ರಮದ ಯಶೋಗಾನಗಳನ್ನು ಹಾಡುವ ಮುನಿ ಕನ್ಯೆಯರೂ ನಮ್ಮ ಕಣ್ಣೆದುರಿನಿಂದ ಮರೆಯಾಗುವುದು ಸಾಧ್ಯವಿದೆಯೇ?

ಸೀ: ಆದರೂ ನಿಮ್ಮಣ್ಣ ಪ್ರಜಾಪಾಲಕರಾಗಿ ಇವೆಲ್ಲವನ್ನೂ—ನಮ್ಮನ್ನು ಮರೆತು ರಾಜ್ಯಭಾರದಲ್ಲಿ ಮಗ್ನರಾಗದಿರಲಾರರು. ಲೋಕೋಪಕಾರದಲ್ಲಿ ವ್ಯಸ್ತರಾದ ಅವರಿಗೆ ಮತ್ತಾವುದರ ನೆನಪೂ ಉಳಿಯಲಾರದು....ಆದರೆ, ಲಕ್ಷ್ಮಣಾ! ಅತ್ತೆ ಕೈಕೇಯಿಯು ರಾಜಮಾತೆಯಾಗುವ ಕನಸಂತೂ ನೆನಸಾಗಲಿಲ್ಲವಲ್ಲ!

ಲ: ರಾಜಮಾತೆ! ಆಕೆ ಪಟ್ಟ ಪಶ್ಚಾತ್ತಾಪ ಎಷ್ಟು ದಯನೀಯವಾಗಿತ್ತು, ಅತ್ತಿಗೆ! ಭರತನೇನೋ ಎಲ್ಲವನ್ನೂ ತ್ಯಜಿಸಿಬಿಟ್ಟ. ಆದ್ದರಿಂದಲೇ ಸಾವಿರಾರು ಸಾಮ್ರಾಟರಿಂದಲೂ ಅವನಿಂದು ಭಾಗ್ಯವಂತನಾಗಿರುವನು. ನನಗೇಕೋ ಈ ನಿಸ್ಸಾರ ರಾಜ್ಯಕ್ಕೆ ಪಾದುಕಗಳು ಬಹಳ ಬೆಲೆ

ಯನ್ನು ಕೊಡುವಂತೆ ಕಾಣುತ್ತದೆ. ಆದರೆ, ಅದರಲ್ಲಿ ಇದೆಯಾದರೂ ಏನು?

ಸೀ: ನನಗೂ ಹಾಗೆಯೇ ತೋರುತ್ತಿದೆ ಸೌಮಿತ್ರಿ! ಈ ಅರಣ್ಯದಲ್ಲಿ ಇರುವ ಸುಖವು ಆ ಅರಮನೆಯಲ್ಲಿಲ್ಲ. ಇಲ್ಲಿ ಒಂದೇ ಒಂದು ಚಿಂತೆಗೆ ಕಾರಣವಾಗಿ ತೋರುವುದಾದರೆ ನಮಗೆ ಅವರನ್ನೂ ಅವರಿಗೆ ನಮ್ಮನ್ನೂ ಕುರಿತು ಆಗುತ್ತಿರುವ ಸ್ನೇಹದ ನೋವು ಅಷ್ಟೇ ಅಲ್ಲವೆ?

ಲ: ಅದನ್ನೇ ಯೋಚಿಸುತ್ತಿರುವೆ ಅತ್ತಿಗೆ. ಒಮ್ಮೊಮ್ಮೆ ಅವರೆಲ್ಲರನ್ನೂ ಇಲ್ಲಿ ಕರೆದು ತಂದು ಅರಮನೆಯಂತೆ ಅರಣ್ಯದಲ್ಲಿಯೂ ನಾವು ಸುಖದಲ್ಲಿರುವುದನ್ನು ಅವರಿಗೆ ತೋರಿಸಬೇಕೆಂದು ತೋರುತ್ತಿದೆ. ಇಲ್ಲವಾದರೆ ನಾವಿಲ್ಲಿ ಇಷ್ಟು ಸಂತಸದಿಂದಿದ್ದರೂ ನಮ್ಮನ್ನು ನೆನೆದು ಮಾತೆಯರು ಚಿಂತಿಸುತ್ತಲೇ ಇರಬಹುದು. ಈ ಪ್ರಕೃತಿಮಾತೆಯ ಮಡಿಲು....

ಸೀ: (ಆಲಿಸಿ) ಅದೋ, ಅವರು ಒಳಗಿಂದ ಕರೆಯುತ್ತಿರುವರು. ನಾನು ಅತ್ತ ಹೋಗುವೆನು. ನೀನು ಫಲಮೂಲಗಳನ್ನು ತರಲು ಹೋಗುವೆಯಲ್ಲವೇ? (ಏಳುವನು.)

ಲ: ಅಹುದು. ಮಾತಿನ ನಡುವೆ ಸಮಯ ಹೋದುದೇ ಅರಿಯಲಿಲ್ಲ. ನಾನಿಷ್ಟರಲ್ಲೇ ಹೊರಡಬೇಕು. (ಲಕ್ಷ್ಮಣನು ಫಲಮೂಲಗಳಿಗಾಗಿ ಕಾಡಿಗೆ ಹೊರಡುವನು. ಸೀತೆ ಒಳಗೆ ನಡೆಯುವಳು.)

ದೃಶ್ಯ ೩

(ಚಂದ್ರಿಕೆಯ ರಾತ್ರಿ. ಪಂಚವಟಿಯ ಪರ್ಣಕುಟಿಯ ಮುಂದಿರುವ ಶಿಲೆಯ ಮೇಲೆ ಲಕ್ಷ್ಮಣನು ಧನುರ್ಧಾರಿಯಾಗಿ ಕುಳಿತಿರುವನು.)

ಲ: (ಸ್ವಗತ) ಎಂತಹ ಅಲೌಕಿಕ ಸೌಂದರ್ಯವಿದು! ಎಲ್ಲರೂ ನಿದ್ರೆಯ ಸುಖವುಣ್ಣುತ್ತಿರುವ ಈ ನಿಶ್ಶಬ್ದ ರಾತ್ರಿಯಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಿರುವ ಮಂದಪವನ—ಗೋದಾವರಿನದಿಯ ಈ ಕಲಕಲ ನಿನಾದ—ಹಸುರೆಲೆಗಳ ಎಡೆಯಲ್ಲಿ ಇಣುಕುತ್ತಿರುವ ತಿಂಗಳಿನ ಬೆಳಕು—ಎಲ್ಲವೂ ನಿಯತಿ ನಟಿಯ ಅವಿಶ್ರಾಂತ ಕುಣಿತವನ್ನು ಸೂಚಿಸುತ್ತಿವೆಯಲ್ಲವೇ! ಆಕಾಶದಲ್ಲಿ ಬೆಳಗುತ್ತಿರುವುದು ನಕ್ಷತ್ರಗಳ ರಾಶಿಯಾದರೆ—ಇಲ್ಲಿ ಉರ್ವಶಿಯ ಒಡಲಿನಲ್ಲಿ ಮುತ್ತುಗಳ ರಾಶಿ.... ಇಂತಹ ನೋಟದ ಸವಿ ಆಯೋ

ಧ್ಯೆಯು ನಾಗರಿಕರಿಗೆ ದೊರೆಯಬಲ್ಲುದೆ? ಆಹಾ! ಎಷ್ಟು ನಿರಾತಂಕವಾಗಿ ಸಾಗುತ್ತಿದೆ ಇಲ್ಲಿ ಜೀವನ! ಈ ಜೀವನವನ್ನೇ ವಿದ್ವಾಂಸರು "ಜೀವನದ ಸಂಗ್ರಾಮ"ವೆಂದು ಹೆಸರಿಸುತ್ತಿರುವುದು?....ನಮ್ಮ ಈ ನಲವನ್ನರಿಯದ ಒಲುಮೆಯ ಊರ್ಮಿಳೆ ನಮಗಾಗಿ ಬರಿದೆ ಅಳುತ್ತಿರುವಳೇನೋ! ನಮಗಿಲ್ಲಿ ಕಾಡೂ ನಾಡಾಗಿದೆಯೆಂದು ಆ ಮುಗ್ಧೆ ಹೇಗೆ ತಾನೆ ತಿಳಿಯಬಲ್ಲಳು? (ಒಂದು ನಿಮಿಷ ಏನೋ ಯೋಚನಾಪರನಾಗುವನು. ಅಷ್ಟರಲ್ಲಿ ಶೂರ್ಪಣಖಿಯ ಪ್ರವೇಶ ಮಿಂಚಿನಂತೆ ಅವನ ಕಣ್ಣು ತೆರೆಸುವುದು. ಬೆಚ್ಚಿ—ದಿಟ್ಟಿಸಿ, ಸ್ವಗತ) ಯಾರಿವಳು ಈ ರೂಪಸಿ? ಮುಖದಲ್ಲಿ ತುಂಬಿದ ಹಾಸ-ನಿಲುವಿನಲ್ಲಿ ನಿಸ್ಸಂಕೋಚ ಭಾವ! ಪ್ರಫುಲ್ಲಿತ ಲತೆಯ ಮೇಲಿನ ಮಿಂಚುಹುಳಗಳಂತೆ ಏಕೆ ಈ ಲತಾಂಗಗಳಲ್ಲಿ ಆಭರಣಗಳ ಭಾರ? ಈ ರಾತ್ರಿಯ ಅಸಮಯದಲ್ಲಿ ಇಲ್ಲಿಗಾದರೂ ಏಕೆ ಬಂದಿರಬಹುದು ಇವಳು? (ಯೋಚಿಸಿ) ದೀರ್ಘನೇತ್ರಗಳಲ್ಲಿ ಹೊಳೆಯುತ್ತಿರುವ ಅತೃಪ್ತ ಕಾಮನೆ! ಆದರೂ ಅನ್ವೇಷಣೆಯಲ್ಲಿ ಸಫಲವಾದಂತೆ ತೋರುವ ಈ ನೋಟದ ಸ್ಥಿರತೆ ಏನನ್ನು ಸೂಚಿಸುತ್ತದೆ? (ಮೆಲ್ಲನೆ ಕಲ್ಲಿನಿಂದ ಕೆಳಗಿಳಿದು) ಕಟಿಗಿಂತಲೂ ಕೆಳಗಿಳಿದ ಕೇಶರಾಶಿಯಲ್ಲಿ ತೆರೆಗಳೊಡನೆ ಆಡುತ್ತಿರುವ ಕಮಲದಂತೆ ಎಡಗೈಯು ಆಡುತ್ತಿದೆ. ಕಾಮನು ಕಲ್ಪವಲ್ಲಿಯ ಮೇಲೆ ತೂಗಿರುವ ಧನುಸ್ಸಿನಂತೆ ಬಲಗೈಯಲ್ಲಿ ಚಿತ್ರ-ವಿಚಿತ್ರ ಸುಮಗಳ ಮಾಲೆ ನೇತಾಡುತ್ತಿದೆ....ಓ, ಈಗ ಅರ್ಥವಾಯಿತು. ಆದರೂ....ಈ ರಾತ್ರಿಯಲ್ಲಿ....ಏಕಾಕಿ....(ಯೋಚನಾಮಗ್ನನಾಗುವನು.)

ಶೂರ್ಪಣಖಿ: (ಲಕ್ಷ್ಮಣನ ಅವಸ್ಥೆಯನ್ನು ನೋಡಿ ಮುಗುಳು ನಕ್ಕು ಎರಡಡಿ ಮುಂದಿಟ್ಟು) ಸುಂದರ! ಈ ನಿಸ್ತಬ್ಧ ರಾತ್ರಿ. ಈ ವನದಲ್ಲಿ ಒಬ್ಬಂಟಿಗನಾಗಿ ಧನುರ್ಧಾರಿಯಾಗಿ ಕುಳಿತು 'ಧೀರ' ಎನ್ನಿಸಿಕೊಳ್ಳುವ ನೀನು ನನ್ನನ್ನು ನೋಡಿ ಏಕೆ ಚಕಿತನಾದೆ? ಅಬಲೆಯಾದ ನಾನೇ ನಿನ್ನೊಡನೆ ನಾಚಿಕೆಗೆಟ್ಟು ಮೊದಲು ಮಾತನಾಡಬೇಕಾಯಿತೆ? ನೀನು ಕುಶಲವನ್ನಾದರೂ ಏಕೆ ಕೇಳಬಾರದು?....ಪುರುಷರ ನಿರ್ಮಮತೆ ಇದರಿಂದ ವ್ಯಕ್ತವಾಗುವುದಲ್ಲವೆ?

ಲ: (ನಸುನಕ್ಕು ಮತ್ತೆ ಗಂಭೀರನಾಗಿ) ಸುಂದರಿ! ಇನ್ನೂ ರಾತ್ರಿ ಉಳಿದಿರುವಾಗ ನಿನ್ನನ್ನು ಒಬ್ಬಂಟಿಗಳನ್ನಾಗಿ ಇಲ್ಲಿ ನೋಡಿ ನಾನು ನಿಜ

ವಾಗಿಯೂ ವಿಸ್ಮಿತನಾಗಿದ್ದೇನೆ.... ನೀನು ಯಾರು? ಹೊರಟಿರುವೆಯಾದರೂ ಎಲ್ಲಿಗೆ? ತನ್ನನ್ನು "ಅಬಲೆ" ಎಂದು ಹೇಳಿಕೊಳ್ಳುತ್ತಿರುವೆಯಾದರೂ ನಿನ್ನಲ್ಲಿ "ಪ್ರಗಲ್ಭತೆ" ಎದ್ದು ತೋರುತ್ತಿದೆಯಲ್ಲ!.... .ನಿಸ್ಪೃಹರಾದ ಪುರುಷರಲ್ಲಿ ನಿರ್ಮಮತೆಯಿದ್ದರೆ ಅದರಲ್ಲಿ ಆಶ್ಚರ್ಯವಾದರೂ ಏನಿದೆ?

ಶೂ: ಅಂದರೇನು—ಬಳಿಗೆ ಬಂದವರೊಡನೆ ಮಾತನಾಡದಿರುವಷ್ಟು ಸ್ನೇಹಶೂನ್ಯರಾಗಬೇಕೇ ಪುರುಷರು?

ಲ: ಎಲೌ ಚಂಡಿ! ಅದನ್ನೇ ಹೇಳುತ್ತಿದ್ದೇನೆ. ಪರನಾರಿಯೊಡನೆ ನಾನೇ ಮೊದಲು ಮಾತನಾಡಿದರೆ ಪುರುಷರ ಧರ್ಮಪರತೆಗೆ ಕಲಂಕ ತಂದಂತಾಗುವುದಿಲ್ಲವೇ?....ಅಷ್ಟೇ ಅಲ್ಲ, ನನ್ನ ಮಟ್ಟಿಗಂತೂ ನಿನ್ನ ಮಾತು ಯಥಾರ್ಥವೇ ಆಗಿದೆ. ಎಲೌ ಚೆಲುವೆ! ನಿನ್ನೊಡನೆ ಏನೆಂದು ಹೇಳಲಿ—ನನ್ನ ಮಮತೆ ಅದೆಷ್ಟು ಕಟುವಾಗಿದೆ ಎಂಬುದನ್ನು ಹೇಳಿದರೆ ನೀನು ನಂಬುವೆಯೋ ಏನೋ....

ಶೂ: ಅದೇನು ಚೆಲುವನಾದ ನಿನ್ನಲ್ಲಿ ಅಂತಹ ಕಾಠಿಣ್ಯ?

ಲ: ತಾಯಿ, ತಂದೆ, ಹೆಂಡತಿ, ರಾಜ್ಯ, ಸಂಪತ್ತು ಎಲ್ಲವನ್ನೂ ಬಿಟ್ಟು ನಾನು ಈ ನಿರ್ಜನ ಅರಣ್ಯಕ್ಕೆ ಬಂದಿರುವೆನೆಂದಾಗ, ಇದರಿಂದಲೇ ನಿನಗೆ ನನ್ನ ಸ್ನೇಹಶೀಲತೆ ಎಷ್ಟು ಕಟುವಾದುದು ಎಂಬುದರ ಅರಿವಾಗಬಹುದು.... ಹೆಚ್ಚೇಕೆ, ಈ ದೀರ್ಘ ಜೀವನದಲ್ಲೂ ನನಗೆ ಹೆಚ್ಚಿನ ಆಶೆಯೇನೂ ಇಲ್ಲ. ಆದರೂ, ಎಲೆ ಮಂಜುಮುಖಿ! ನಾನು ಪರಮ ಸುಖಿ! ಮಮತೆ ಮಾರ್ದವತೆಯೆಲ್ಲವೂ ಸ್ತ್ರೀಯರ ಸೊತ್ತಲ್ಲವೇ?

ಶೂ: ನಿನ್ನ ಮಾತೇಕೋ ನನಗೆ ಅರ್ಥವಾಗಲೊಲ್ಲದು....

ಲ: ಆಶ್ಚರ್ಯ! 'ಧೀರ' ಎಂದು ನನ್ನನ್ನು ಕರೆದರೂ 'ಭೀರು' ಎಂದು ತಿಳಿದಿರುವುದರಿಂದ ನೀನು 'ಸೂಕ್ಷ್ಮದರ್ಶಿನಿ'ಯೆಂದಂತಾಯಿತು. ಮತ್ತೇಕೆ ನಿನಗೆ ನನ್ನ ಮಾತು ಅರ್ಥವಾಗಲಾರದು?....ಆದರೂ, ಎಲೆ ಪ್ರಮದೆ! ನಿನ್ನನ್ನು ಈ ರೀತಿ ಈ ವನದಲ್ಲಿ ನೋಡಿ ನನ್ನ ಮನದಲ್ಲೊಂದು ಸಂಶಯ ವೇಳುತ್ತಿದೆ....

ಶೂ: (ಕುತೂಹಲದಿಂದ) ಏನದು?

ಲ: ನಿನ್ನನ್ನು ಮಾನವ ಸ್ತ್ರೀಯೆಂದು ನಾನು ತಿಳಿಯಲೇ? ಆದರೆ, ಮಾನವ ಸಹಜವಾದ ಸಂಕೋಚ ನಿನ್ನಲ್ಲಿಲ್ಲ. 'ದಾನವಿ'ಯೆಂದು ಹೇಳು

ವೆನೆಂದರೆ ನಿನ್ನ ಈ ಲಾವಣ್ಯ ಅಡ್ಡಿ ಬರುತ್ತಿದೆ. ಮತ್ತಾರು, ನೀನು ವನ ದೇವಿಯೋ?.... ಇರಲಾರದು. ಆಕೆಯಲ್ಲಿರುವ ಮುಗ್ಧತೆಗೆ ನಿನ್ನಲ್ಲಿ ಸಂ ಪೂರ್ಣ ಅಭಾವವಿದೆಯೆಂದಾಗ, ನೀನಾರು ಎಂಬುದನ್ನು ನೀನೇ ಏಕೆ ತಿಳಿಸ ಬಾರದು?

ಶೂ: (ನಿರಾಶೆಯ ಸ್ವರದಲ್ಲಿ) ಎಲೈ ನಿಷ್ಠುರ ಕಾಂತನೇ, ನೀನಾರು ಎಂದಿಷ್ಟೇ ಕೇಳುವೆಯಾ? ಆಶೆಯಿಂದ ಕೂಡಿದ ನನ್ನ ಮನಕ್ಕೆ ಅಲ್ಪವಾ ದರೂ ಶಾಂತಿ ಸಿಗುವಂತೆ 'ಏನನ್ನು ಬಯಸುವೆ?' ಎಂದಾದರೂ ನೀನೇಕೆ ಕೇಳಬಾರದು?........(ಸ್ವ) ಇವನಿಂದ ಇಂದು ನಿರಾಶಿತಳಾಗಿಯೇ ನಾನು ಹಿಂದಿರುಗಬೇಕಾಗುವುದು. ಆದರೂ ಇಲ್ಲಿಯ ತನಕ ಬಂದಿರುವೆನೆಂದಾಗ ಬರಿದೆಯೇ ಏಕೆ ಹಿಂದಿರುಗಬೇಕು? (ಪ್ರ) ನೀನಾರು ಎಂದು ಕೇಳಿದೆಯಲ್ಲ? ನಾನು ನಿನ್ನ ಅತಿಥಿ! ಅತಿಥಿಗೆ ಆತಿಥ್ಯ ದೊರೆಯಬಹುದೆ?

ಲ: (ಆಶ್ಚರ್ಯಚಕಿತನಾಗಿ) ಈಕೆಯ ಮುಗ್ಧ ರೂಪಕ್ಕೂ ಮಾತಿಗೂ ಇದೆಂತಹ ಅಂತರ!

ಶೂ: ಏಕೆ ಉತ್ತರಕೊಡಲಾರೆ? ಕಲ್ಲು ಕರಗಿದರೂ ನಿನ್ನ ಹೃದಯ ಕರಗಲಾರದೆ? (ತುಟಿ ಕಚ್ಚುವಳು.)

ಲ: (ಮುಗುಳುನಕ್ಕು) ಎಲೆ ಮಾಯಾವಿನಿ! ಸಿಟ್ಟುಗೊಳ್ಳದಿರು. ಆತಿಥ್ಯದ ಕುರಿತೇ ಯೋಚಿಸುತ್ತಿದ್ದೇನೆ. ನೀನು ಅನುಪಮ ಐಶ್ವರ್ಯ ವತಿ; ನಾನಾದರೊ ಐಶ್ವರ್ಯಹೀನ, ನಿರ್ಗತಿಕ, ವನವಾಸಿ—ಎಂದಾಗ ನಿನಗೆಂತು ಆತಿಥ್ಯವನ್ನೀಯಬಲ್ಲೆ? ಅದಕ್ಕಾಗಿಯೇ ನಾಚುಗೆಪಡುತ್ತಿದ್ದೇನೆ.

ಶೂ: (ಥಟ್ಟನೆ) ನಿನ್ನ ಭಾವವು ಇದೀಗ ನನಗೆ ಅರ್ಥವಾಯಿತು........ ವಿಧಿಯು ನಿನಗಾವ ಐಶ್ವರ್ಯವನ್ನು ಕೊಡುಗೆಯಾಗಿ ಇತ್ತಿದೆಯೋ ಅದನ್ನು ಸುರರಿಗೂ ಕೂಡ ಕೊಟ್ಟಿಲ್ಲ ಎಂದಾಗ ನೀನು ಐಶ್ವರ್ಯಹೀನನೇ?

ಲ: ನಿನ್ನ ಮಾತೇಕೋ ನನಗೆ ಬಿಡಿಸಲಾರದ ಒಗಟಾಗಿ ತೋರು ತ್ತಿದೆಯಲ್ಲ!

ಶೂ: ಸರಳವಾದ ನುಡಿಯನ್ನು ಒಗಟೆಂದು ತಿಳಿಯುವ ನಿನಗೆ ಹಾಗೆ ತೋರಿದುದರಲ್ಲಿ ಆಶ್ಚರ್ಯವೇನಿದೆ?........ನನಗೂ ನಿನ್ನ ಈ ವರ್ತನೆಯು ಆಶ್ಚರ್ಯದಾಯಕವಾಗಿದೆ........ಯಾವ ಇಚ್ಛೆಯಿಂದ ಈ ವ್ರತದಲ್ಲಿ ನೋಂ ತಿರುವೆ ಹೇಳು! ನೀನು ಇಚ್ಛಿಸಿದುದನ್ನು ಒದಗಿಸಿಕೊಡಬಲ್ಲ ಸಾಮರ್ಥ್ಯ

ನನ್ನಲ್ಲಿರುವಾಗ ಇನ್ನು ಈ ಕಷ್ಟಕರವಾದ ತಪವಾದರೂ ಏಕೆ? ಐಶ್ವರ್ಯದ ಅಭಿಲಾಷೆಯು ನಿನಗಿದೆಯಾದರೆ ಚಿನ್ನ ಬೆಳೆವ ನನ್ನ ರಾಜ್ಯಕ್ಕೆ ನೀನೇ ಅರಸನಾಗುವೆಯಂತೆ. ನಿನ್ನ ಯಾವ ವೈರಿಯು ದುರ್ಜನನಾಗಿರುವನು? ಹೇಳು. ಕಾಲಾನಲದಂತಹ ನನ್ನ ಕ್ರೋಧವು ಅವನನ್ನು ಕ್ಷಣಮಾತ್ರದಲ್ಲಿ ಭಸ್ಮ ಮಾಡಿಬಿಡುವುದು. ತಿಳಿಸು—ಯಾಕೆ ಈ ಯೌವ್ವನದ ತಿಂಗಳಲ್ಲಿ ವೈರಾಗ್ಯದ ನೆರಳು!....ಅವಳಾದರೂ ಮೋಹಿನಿಯಲ್ಲಿ ಮೋಹಿತನಾಗಿ ಈ ನಿಯಮಗಳಿಂದ ಬಂಧಿತನಾರುಗಿವೆಯಾ? ಅದರೆ ನೀನು ನಿಜವಾಗಿಯೂ ತಿಳಿಗೇಡಿ....

ಲ: (ಮುಗುಳುನಗುವನು.)

ಶೂ: ....ಏಕೆಂದರೆ ನಿನ್ನ ಈ ಯೌವ್ವನ ಧನಕ್ಕೆ ತಮ್ಮ ಪ್ರಾಣವನ್ನೇ ಬಲಿಯೊಯಲಾರದ ಕಾಂತೆಯಾದರೂ ಇರುವಳೇ? ಆದ್ದರಿಂದ ಎಲೆ ಕಾಂತ! ಇದನ್ನು ನಿಷ್ಫಲಗೊಳಿಸಬೇಡ. ಯಾವುದಾದರೂ ವೈರಾಗ್ಯದಿಂದ ಸಂಸಾರದಲ್ಲಿ ವೈರಾಗ್ಯ ತಾಳಿರುವೆಯಾದರೆ ಇನ್ನೊಮ್ಮೆ ನನ್ನೊಡನೆ ಬದುಕನ್ನು ಪರೀಕ್ಷಿಸಿ ನೋಡಬಾರದೇಕೆ?

ಲ: (ಗಂಭೀರನಾಗಿ) ಎಲೌ ಧನ್ಯೇ! ಲಲನಾಸಹಜವಾದ ಸಹಾನುಭೂತಿಯನ್ನು ತೋರಿದುದಕ್ಕಾಗಿ ನಿನಗೆ ಧನ್ಯವಾದಗಳು............ಆದರೆ ನಿನ್ನೊಡನೆ ಮನಬಿಚ್ಚಿ ಹೇಳುತ್ತಿದ್ದೇನೆ—ನನಗಾವ ಅಭಾವವೂ ಇಲ್ಲ.

ಶೂ: ಆದರೇನು, ನಿಷ್ಕಾಮಿಯಾಗಿ ತಪಸ್ಸುಮಾಡುತ್ತಿರುವೆಯಾ ಈ ಪ್ರಾಯದಲ್ಲಿ? ಎಂತಹ ಹುಚ್ಚು! ನಿನ್ನ ಈ ತಪಸ್ಸಿಗೆ ಫಲವು ತಾನಾಗಿಯೇ ದೊರೆತರೂ ಅದನ್ನು ಭೋಗಿಸಲಾರೆಯಾ ನೀನು?

ಲ: (ನಕ್ಕು) ಚೆನ್ನಾಯಿತು. ನಿನ್ನಿಂದ ಪುಕ್ಕಟೆಯಾಗಿ ತಾಪಸ ಪದವಿಯನ್ನು ಪಡೆದೆ ನಾನು........ಆದರೂ ನೀನು ಹೇಳಿದಂತೆ ತಾನಾಗಿಯೇ ತಪದ ಫಲ ದೊರೆತರೆ ಅದನ್ನು ನಾನು ಭೋಗಿಸದೆ ನಿನ್ನಂಥವರಿಗಾಗಿ ಕಾಯ್ದಿರಿಸುವೆ.

ಶೂ: (ಥಟ್ಟನೆ) ಆ ಫಲ ನಾನೇ ಆದರೆ ಏನು ಮಾಡುವೆ? ತಿಳಿಸು.

ಲ: ಅದರಲ್ಲಿ ಯೋಚಿಸುವುದಕ್ಕೇನಿದೆ? ನಿನಗೆ ತಕ್ಕ ವರನನ್ನು ಹುಡಕುವೆ.

ಶೂ: ಹುಡುಕುವುದನ್ನಂತು ನಾನು ಮಾಡಿರುವೆ.

ಲ: ಯಾರವನು?

ಶೂ: ಹೇಗೆ ಹೇಳಲಿ? ನನ್ನ ಎದುರೇ ಇದ್ದರೂ ಅವನ ಹೆಸರು ಮಾತ್ರ ತಿಳಿದಿಲ್ಲ........

ಲ: (ಕುತೂಹಲದಿಂದ) ಅಂದರೆ____

ಶೂ: ನೀನು....(ನಸು ಲಜ್ಜಿತಳಾಗುವಳು)

ಲ: ಶಾಂತಂ ಪಾಪಂ! ಶಾಂತಂ ಪಾಪಂ! ಎಲಾ ಬಾಲೆ, ನಾನು ವಿವಾಹಿತನಾಗಿರುವೆನಲ್ಲ?

ಶೂ: ಅದರೇನು? ಎರಡು ಮದುವೆಯಾದ ಗಂಡುಸರಿಲ್ಲವೆ?....ಗಂಡು ಸರೇ ಮಾಡಿದ ಶಾಸ್ತ್ರ....ತಮ್ಮೆಲ್ಲಾ ಅನುಕೂಲತೆಗಳನ್ನೂ ಮೊದಲೇ ನಿರ್ವಿಸಿಕೊಂಡು ಸ್ತ್ರೀಯ ಸುತ್ತಲೂ ಬಂಧನವನ್ನು ಬಿಗಿದಿದ್ದೀರಿ ನೀವು....

ಲ: ನೀನೇಕೋ ಅಸಹನೆಯಿಂದ ಸಮಾಜದ ಮೇಲೆಯೇ ಸಿಟ್ಟು ಗೊಂಡಂತೆ ತೋರುತ್ತಿದೆ; ನಿನ್ನ ಅಭಿಪ್ರಾಯವಾದರೂ ಏನು—ಸ್ತ್ರೀಯರೇ ಶಾಸ್ತ್ರ ರಚನೆಯನ್ನು ಮಾಡಿ ಬಹುಪತಿತ್ವದ ವಿಧಾನವನ್ನನುಸರಿಸಬೇ ಕೆಂದೇ? ಈ ಬಹುವಿವಾಹದ ಪರಿಣಾಮವಾಗಿ ಸಮಾಜ ಯಾವ ಅವನತಿಯ ಗರ್ತಕ್ಕೆ ಇಳಿಯಬಹುದು ಆಲೋಚಿಸು........ಆದ್ದರಿಂದ ಎಲೆ ಭದ್ರೇ, ಅಭಿಪ್ರಾಯವನ್ನು ಬಿಡು. ನನ್ನನ್ನು ಕ್ಷಮಿಸು, ಬೇರೆ ಯಾರನ್ನಾದರೂ ಧನ್ಯನನ್ನು ವರಿಸಿ ಕೃತಕೃತ್ಯಳಾಗು.

ಶೂ: ಹೇಗೆ ವರಿಸಲಿ ಕಾಂತ? ನನ್ನ ಮನವನ್ನೇ ನೀನು ಕದ್ದು ಕೊಂಡ ಮೇಲೆ ಅದು ಹೇಗೆ ಸಾಧ್ಯ?

ಲ: ಇದೇನು ಕಳ್ಳತನದ ಅಪವಾದವನ್ನು ನನ್ನ ಮೇಲೆ ಹೇರಿದೆಯಾ?

ಶೂ: ನನ್ನ ಮನವೇ ಇಂದು ವಿಕಲವಾಗಿ ನನ್ನನ್ನುಳಿದಿದೆಯೆಂದಾಗ ನಿನ್ನ ಮೇಲೆ ಕಳ್ಳತನವನ್ನು ಆರೋಪಿಸಬಾರದೇ?........ಇದನ್ನು ನೀನು ಆಲೋಚಿಸು—ಚಕೋರವು ಮೋಸಹೋಗುವುದಾದರೆ ಅದರಲ್ಲಿ ಚಂದ್ರನ ತಪ್ಪೇನು? ಆದರೆ ತನ್ನ ತಂಗದಿರುಗಳನ್ನು ಅವನು ಅದರ ಬಳಿಗೆ ಸರಿಸುವ ನಲ್ಲವೇ? ದೀಪವು ಬೆಳಕನ್ನೀಯದಿದ್ದರೆ ಪತಂಗವು ಅದಕ್ಕೆ ಬಿದ್ದು ಸಾಯ ಲಿಕ್ಕಿದೆಯೇ? ವ್ಯಾಧನು ಮೋಹಕವಾದ್ಯದಿಂದ ಮುಗ್ಧವನ್ನಾಗಿ ಮಾಡಿ ಮೃಗವನ್ನು ಹಿಡಿಯುವನಲ್ಲವೇ? ಇಷ್ಟು ಮನೋಹರ ರೂಪವನ್ನು ತಾಳಿ ಕೊಂಡು ನೀನೇಕೆ ನನಗೆ ಕಾಣಬಂದೆ? ಪ್ರಭಾತ ಪವನ ಚಲಿಸಿದರೂ ಕೋಮಲ ಕಮಲದ ಮೊಗ್ಗು ಅರಳಬಾರದೇ? ಹೇಳು........

ಲ: ಎಲೆ ವಿಲಕ್ಷಣೇ! ಏಕೆ ಸುಮ್ಮಗೆಯೋ ಗಾಳಿಯಲ್ಲಿನ ಕೇತನದಂತೆ ಅತ್ತಿತ್ತ ಹೊಡೆದಾಡುತ್ತಿರುವೆ? ಆವೇಶಯುಕ್ತಳಾಗಿ ಆರ ರೂಪವನ್ನು ಇಷ್ಟು ನುಳಿಸುತ್ತಿರುವೆಯೋ—ಅವನ ಕುಲಶೀಲಗಳ ಕುರಿತು ನೀನು ಸ್ವಲ್ಪವಾದರೂ ವಿಚಾರಿಸಬೇಡವೇ?

ಶೂ: (ವೈಮುರಿದು) ಎಲೆ ಮನುಜ! ನನ್ನ ಹೃದಯವನ್ನೇ ಹರಿಸಿ ಇದೀಗ ಏನು ಕೇಳುತ್ತಿರುವೆ? ಪ್ರೇಮಪ್ರವಾಹ ಪತಿತಳಾದ ನಾನು ನನ್ನ ಕುಲಶೀಲಗಳನ್ನೇ ವಿಚಾರಿಸುವುದಿಲ್ಲವೆಂದಾಗ ನಿನ್ನಲ್ಲದನ್ನು ವಿಚಾರಿಸಬೇಕಾದರೂ ಹೇಗೆ? (ಅತ್ತಿತ್ತ ನೋಡಿ) ಇದೋ, ರಾತ್ರಿ ಕಳೆಯುತ್ತಿದೆ. ಈಗ ಮಧುರ ವಚನಗಳನ್ನಾಡು. ಪ್ರೇಮಾತಿಥಿಯು ಈ ರೀತಿ ಬಾಗಿಲಿನಲ್ಲಿ ನಿಂದಿರುವಾಗ ಹೃದಯದ್ವಾರವನ್ನು ತೆರೆಯಲಾರೆಯಾ ಕಾಂತ? (ಎರಡು ಹೆಜ್ಜೆ ಮುಂದಿಡುವಳು)

ಲ: (ಅಷ್ಟೇ ಹಿಂದೆ ಸರಿದು) ಎಲೌ ನಾರಿ, ನೀನೆಂತಹ ಭ್ರಮೆಯಲ್ಲಿ ಸಿಲುಕಿರುವೆ! ಈ ಅಂಧ ಮೋಹವನ್ನೇ ನೀನು ಪ್ರೇಮವೆಂದು ಕರೆಯುತ್ತಿರುವುದು? ಇದು ಆತ್ಮದ ವಿಶ್ವಾಸವಲ್ಲ—ನಿನ್ನ ಮನವೆಸಗುತ್ತಿರುವ ವಿದ್ರೋಹ! ವಿಷಭರಿತ ವಾಸನೆಯನ್ನು ಸುಧಾಪೂರ್ಣ ಪ್ರೀತಿಯೆಂದರಿಯಬೇಡ........ಎಲೌ ಪ್ರಮದೇ! ಸಾರಿ ಹೇಳುತ್ತಿರುವೆ ನಾನು—ಇದು ರೀತಿಯಲ್ಲ, ನೀತಿಯಲ್ಲ—ಅನೀತಿ! ಈ ಮೃಗತೃಷ್ಣೆ ಶಾಂತಿಯ ಮಾರ್ಗವಲ್ಲ; ಕ್ರಾಂತಿಯ ದುರ್ಗ! ವಿವೇಕವನ್ನು ಕಳೆದುಕೊಳ್ಳದೆ ಯೋಚಿಸಿ ನೋಡು. ನಾನು ಪರಪುರುಷನೆಂಬುದನ್ನು ನೆನಪಿನಲ್ಲಿಟ್ಟುಕೋ; ಭಾವನೆಯ ಭ್ರಾಂತಿಯಿಂದ ಉದ್ಭ್ರಾಂತಳಾಗಬೇಡ!.......(ಇಷ್ಟರಲ್ಲಿ ಅರುಣೋದಯವಾಗುತ್ತದೆ. ಹತ್ತಿರದ ಕುಟಿಯಿಂದ ಅವನಿಯ ಉಷೆಯಂತೆ ಸೀತೆ ಹೊರಗೆ ಬರುತ್ತಾಳೆ, ಆ ಪ್ರಮದೆ ಅಯೋಚಿತವಾಗಿ ಎದುರು ಬಂದ ಸೀತೆಯನ್ನು ನೋಡಿ ಬೆಚ್ಚುತ್ತಾಳೆ. ಅವಳ ಸೌಂದರ್ಯದಿಂದ ಬೆರಗಾದ ಆಕೆ ಒಮ್ಮೆ ಆಕಾಶದ ಕಡೆಗೂ ಮತ್ತೊಮ್ಮೆ ಸೀತೆಯ ಕಡೆಗೂ ದೃಷ್ಟಿ ಬೀರುತ್ತಾಳೆ.)

ಸೀತೆ: (ಒಮ್ಮೆ ರಮಣಿಯನ್ನೂ ಮತ್ತೊಮ್ಮೆ ಲಕ್ಷ್ಮಣನನ್ನು ನೋಡಿ ನಕ್ಕು) ಸೌಮಿತ್ರಿ! ನೀನೆಂತಹ ನಿರ್ದಯನು? ಮನೆಗೆಬಂದವರಿಗೆ ಅಪಮಾನ ಮಾಡುವೆಯಾ? ಇವಳೇನೂ ನಿನ್ನಿಂದ ಆಶ್ರಯ ಪಡೆಯುವುದಕ್ಕೆ ಬಂದಿಲ್ಲ; ಸಂಕೋಚವಿಲ್ಲದೆ ತನ್ನ ಸರ್ವಸ್ವವನ್ನೂ ನಿನಗೆ ಅರ್ಪಿಸಲು ಮುಂದೆ ಬಂದಿರುವಳು ಎಂದಾಗ ಅದನ್ನು ಸ್ವೀಕರಿಸುವುದರಲ್ಲಿ ಏಕೆ ಯೋಚನೆ?

ಲ: (ಸೀತೆಯ ಪಾದಪದ್ಮಗಳಿಗೆ ಬಾಗುವನು.)

ಸೀ: ನಿನ್ನೆಲ್ಲಾ ಅಭೀಷ್ಟಗಳೂ ಪೂರೈಸಲ್ಪಡಲಿ. (ಲಕ್ಷ್ಮಣನು ಮೇಲೇಳುವನು.) ಲಕ್ಷ್ಮಣಾ! ನಿಮ್ಮೆಲ್ಲಾ ಮಾತುಗಳನ್ನು ನಾನು ಕೇಳಿಲ್ಲ. ನಿಮ್ಮ ಈ ನೂತನ ಶುಕ–ರಂಭಾ ಸಂವಾದವು ಆರಂಭವಾಯಿತಾದರೂ ಯಾವಾಗ? (ಮತ್ತೆ ಸಸುನಕ್ಕು ಶೂರ್ಪಣಖೆಯ ಕಡೆಗೆ ನೋಡಿ) ನೀನು ಖಿನ್ನಳಾಗಬೇಡ ತಂಗೀ. ನನ್ನ ಮೈದುನನ ಸ್ವಭಾವವೇ ವಿಚಿತ್ರ ನೋಡು—ಇಲ್ಲವಾದರೆ ಹೊಸತಾಗಿ ಮದುವೆಯಾದ ನವ-ವಧುವನ್ನು ಮನೆಯಲ್ಲಿ ಬಿಟ್ಟುಬರುವನೇ ಹೇಳು. ಇಷ್ಟೇ ಅಲ್ಲ, ಈ ವಯಸ್ಸಿನಲ್ಲಿ ಏಕೋ ವೈರಾಗ್ಯ ತಾಳಿಕೊಂಡಿದ್ದಾನೆ.

ಶೂ: ಆದರೆ ನೀವಾದರೂ ಇವನಿಗೆ ತಿಳಿಯಹೇಳಬಾರದೇ, ಅಕ್ಕ?

ಸೀ: ಏಕೆ ಹೇಳಬಾರದು? ನಿನಗೆ ಇವನಲ್ಲಿ ಇಚ್ಛೆಯಿದೆಯಾದರೆ ಇವನನ್ನು ನಾನೇ ಒಪ್ಪಿಸಿ ನಿನ್ನನ್ನು ವರಿಸುವಂತೆ ಮಾಡುವೆನು. ಆದರೆ ಒಂದೇ ಆತಂಕವಿದೆ. ನೀನು ಐಶ್ವರ್ಯವತಿ—ನಾವು ದರಿದ್ರ ವನವಾಸಿಗಳು.

ಶೂ: ಇದು ಒಂದು ಆತಂಕವೇ ಅಲ್ಲ ದೇವಿ. ನೀವು ಹೇಗಾದರೂ ಇವನನ್ನು ನನ್ನ ಸ್ವಾಮಿಯನ್ನಾಗಿ ಮಾಡಿದರೆ, ನಾನು ಎಂದೆಂದಿಗೂ ನಿಮ್ಮ ಕಿಂಕರಳಾಗಿರುವೆನು.

ಸೀ: ಬೇಡ ಬಿಡು. ಅಷ್ಟೆಲ್ಲಾ ಏಕೆ? ಈ ವನಜೀವನದಲ್ಲಿ ನಿನ್ನಂಥ ತಂಗಿಯೊಬ್ಬಳು ದೊರೆತರೆ ನಾನೂ ಕೃತಾರ್ಥಳಾಗುವೆನು.

ಲ: (ಸ್ವಗತ) ಈ ಭಾಮೆಯ ಕುರಿತು ನನ್ನ ಅಭಿಮತವೇನೆಂಬುದನ್ನು ಅತ್ತಿಗೆಯು ಅರಿಯದವರಲ್ಲ. ಮತ್ತೇಕೆ ಇವರು ಹೀಗೆ ಮಾತನಾಡುತ್ತಿರುವರು? (ಪ್ರ) ನಿಮ್ಮ ಈ ಮಾತುಗಳಲ್ಲಿ ಆವ ವಿನೋದವಿದೆ, ಅತ್ತಿಗೆ?

ಸೀ: (ಥಟ್ಟನೆ) ಆದರೆ ನಾನು ವಿನೋದವೆಸಗುತ್ತಿರುವೆನೆ? ಭ್ರಾತೃಸ್ನೇಹಿಯಾದರೂ ನೀನು ನಿನ್ನ ಬಗ್ಗೆಂತೂ ರೂಕ್ಷನಾಗಿರುವೆಯಲ್ಲ? ನೋಡು, ತನ್ನ ಸರ್ವಸ್ವವನ್ನೂ ನಿನಗೆ ಅರ್ಪಿಸುವುದಕ್ಕೆಂದು ವರಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡು ಈಕೆ ಮುಂದೆ ಬಂದಿರುವಾಗ ಅವಳೊಡನೆ ಯಾವ ಮನಸ್ಸಿನಿಂದ ಇಂತಹ ವರ್ತನೆಯನ್ನು ತೋರುತ್ತಿರುವೆ? ಹೇಳು.

ಲ: ಸುಖದುಃಖವನ್ನು ಸಹಿಸುವ ಮನಸ್ಸೇ ನನಗೆ ಇಲ್ಲವೆಂದ ಮೇಲೆ ಯಾವ ಮನಸ್ಸಿನಿಂದ ಎಂದು ಹೇಳಲಿ ನಾನು?

ಸೀ: ಒಳ್ಳೆಯದು. ಇರು ನೀನು (ಪರ್ಣಕುಟಿಯ ಕಡೆ ತಿರುಗಿ) ಆರ್ಯಪುತ್ರ, ಎದ್ದು ನೋಡು— ಇಂದು ಎಂತಹ ಸುಪ್ರಭಾತವೆಂದು. ಸ್ವತಃ ಸಿದ್ಧಿಯೇ ಅನುಜ ವಧುವಿನ ರೂಪದಲ್ಲಿ ಪೈವೆತ್ತು ಬಾಗಿಲಿನಲ್ಲಿ ನಿಂತಿದೆ ನೋಡು.

(ಅಷ್ಟರಲ್ಲಿ ಶ್ಯಾಮಶೋಭೆಯನ್ನು ಹೊರಚೆಲ್ಲಿ ರಾಮನು ಕುಟಿಯಿಂದ ಹೊರಬಂದು, ತನ್ನ ಕಾಲುಗಳಿಗೆ ಬಿದ್ದ ಲಕ್ಷ್ಮಣನನ್ನು ಮೇಲೆತ್ತುತ್ತಾನೆ.)

ಸೀ: ನಾಥ! ಎಂತಹ ಅಮೂಲ್ಯ ಸಂದರ್ಭವೊಂದು ಎದುರುಬಂದಿದೆ ....ಇವನೆಣಿಕೆಯಲ್ಲೇನೋ ಇಂದ್ರಾಸನಕ್ಕೂ ಬೆಲೆಯಿಲ್ಲದಿರಬಹುದು. ಆದರೆ ಈ ಅಪ್ಸರೆಯ ನಮ್ರ ವಿನಂತಿಯನ್ನಾದರೂ ಇವನೇಕೆ ಕೇಳಬಾರದು? ಎಂತಹ ಹುಚ್ಚು! ನಿಮ್ಮೆಲ್ಲರ ಸ್ವಭಾವವೂ ಹೀಗೇ ಅಲ್ಲವೇ? ಇಲ್ಲವಾದರೆ ಮನೆಗೆ ಬಂದ ಲಕ್ಷ್ಮಿಯನ್ನು ಬಿಟ್ಟುಕೊಡುವವನಾರು? ನೋಡು. ಇವಳು ಕೈಯಲ್ಲಿ ಹಿಡಿದಿರುವ ವರಮಾಲೆ ಬಾಡತೊಡಗಿದೆ. ಆದರೆ ಇವನಿನ್ನೂ ತನ್ನ ಕಂಠವನ್ನು ಕುಂಠಿತಮಾಡಿಕೊಂಡೇ ಇರುವನಲ್ಲ!

ರಾಮ: (ನಸುನಕ್ಕು ಮೊದಲು ತಮ್ಮನ ಕಡೆಗೂ ಮತ್ತೆ ರಮಣಿಯ ಕಡೆಗೂ ನೋಡಿ) ಎಲೌ ಸಾಧ್ವಿ! ನೀನಾರು? ಏನನ್ನು ಬಯಸುತ್ತಿರುವೆ? ಹೇಳು.

ಶೂ: (ಸಂತುಷ್ಟಳಾಗಿ) ನೀನಾದರೂ ನನ್ನೊಡನೆ ಏನನ್ನು ಬಯಸುತ್ತಿರುವೆಯೆಂದು ಕೇಳಿದೆಯಲ್ಲವೇ? ಅದುವೇ ನನಗೆ ಸಂತೋಷ 'ನಾನಾರು' ಎಂಬುದನ್ನು ನನ್ನ ಈ ವೇಷವೇ ತಿಳಿಸುವುದಲ್ಲವೇ.... ಸ್ವಚ್ಛಂದ ಸ್ವಭಾವದ ನಾನು ಅರ್ಧ ರಾತ್ರಿ ಕಳೆದ ನಂತರ ಏಕೋ ಇತ್ತಕಡೆ ಹೊರಟು ಬಂದೆ. ಒಬ್ಬಳೇ ತಿರುಗಾಡುತ್ತಾ ವನವನ್ನು ಪ್ರವೇಶಿಸಿದೆ. ಇಲ್ಲಿ ಒಂದು ತಿಂಗಳ ಇರುಳಿನಲ್ಲಿ ಶಿಲೆಯ ಮೇಲೆ ಧನುರ್ಧಾರಿಯಾಗಿ ಕುಳಿತ ನಿನ್ನ ಪ್ರಾಣಾನುಜನನ್ನು ನೋಡಿದೆ....

ರಾ: ಮತ್ತೇನಾಯಿತು?

ಶೂ: ಸತ್ಯದೆದುರು ಸಂಕೋಚವನ್ನಡಗಿಸಿ ನಾನು ಹೇಳುತ್ತಿರುವೆ— ಇವನನ್ನು ನೋಡಿ ಏಕೋ ನನಗೆ ಇವನನ್ನು ವರಿಸುವ ಮನಸ್ಸಾಯಿತು.

ಯಾವನೊಬ್ಬ ದೇವತೆಗೂ ವಶವಾಗದ, ಯಾವುದೇ ಲೋಭ ಮೋಹ ಗಳಿಗೂ ತಲೆಬಾಗದ ನನ್ನ ಮನಸ್ಸು ಇವನಿಂದ ಸೆಳೆಯಲ್ಪಟ್ಟಿತು.... ಇವನ ಸೌಂದರ್ಯಕ್ಕೆ ಮರುಳಾಗಿ ಎಷ್ಟೋ ಹೊತ್ತು ಮರೆಯಲ್ಲಿ ನಿಂತು ನೋಡು ತ್ತಿದ್ದೆ. ಅವುದೋ ಹಾವಭಾವಗಳಲ್ಲಿ ಮುಳುಗಿದ್ದ ನಾನು ಮನದ ಅಭಿ ಲಾಷೆಗಳನ್ನು ನೇಯುವಂತೆ ಮತ್ತೆ ಈ ಮಾಲೆಯನ್ನು ಕೋದು ಇದನ್ನು ಇದನ್ನು ಇವನಿಗೆ ಅರ್ಪಿಸುವುದಕ್ಕಾಗಿ ಇಲ್ಲಿಗೆ ಬಂದೆ! ಆದರೆ....

ರಾ: ಏನು ಆದರೆ?

ಸೀ: ಇಲ್ಲಿ ಬಂದಾಗ ನನ್ನೆಲ್ಲಾ ಆಶೆಗಳೂ ನಿರಾಶೆಯಾದುವು. 'ನೀನಾರು' ಎಂಬ ಶುಷ್ಕ ಉಪಚಾರವಷ್ಟೇ ಇವನ ಬಾಯಿಯಿಂದ ಹೊರ ಬಿತ್ತಲ್ಲದೆ ನೀನು ಕೇಳಿದಂತೆ ಏನನ್ನು ಬಯಸುವೆಯೆಂದೂ ಇವನು ಕೇಳಲಿಲ್ಲ........

ರಾಮ: (ಮುಗುಳು ನಕ್ಕು ಲಕ್ಷ್ಮಣನ ಕಡೆಗೆ ನೋಡುವನು.)

ಶೂ: ....ಆದರೂ, ಎಲೆ ಕಾಂತ! ನಿನ್ನಲ್ಲಿ ಹಿರಿತನದೊಂದಿಗೆ ದೃಢತೆ-ಮಾರ್ದವತೆಗಳೆಲ್ಲವೂ ಅಡಗಿವೆ. ಆದ್ದರಿಂದ ನೀನೇ ಜಯಮಾಲೆ ಯಂತಿರುವ ಈ ವರಮಾಲೆಯನ್ನು ಧರಿಸು.... ನಿನ್ನ ಈ ಏಕಾಂತ ಪರ್ಣ ಶಾಲೆಯು ಪ್ರಾಸಾದವಾಗಲಿ! ನನ್ನನ್ನು ಪರಿಗ್ರಹಿಸಿದರೆ ಈ ಭಾಮೆಯ ಭ್ರೂಭಂಗವನ್ನಂತೂ ನೀನು ಬೇಗನೇ ಮರೆತುಬಿಡುವೆ. ಹೇಮಕೂಟ, ಕೈಲಾಸ ಮೊದಲಾದ ಪರ್ವತಗಳಲ್ಲಿ ನನ್ನೊಡನೆ ಆಲೆದಾಡಿ ಸುಖಪಡುವೆ....

ಸೀ: ಕಷ್ಟ! ಎಲೆ ರಮಣಿ! ಹೀಗೆ ಮಾಡುವುದಕ್ಕೆ ಬೆರಳು ತೋರಿಸಿ ದರೆ ಕೈ ನುಂಗುವುದೆಂದು ಹೇಳುವರಲ್ಲವೇ?

ಲ: (ಮಾರ್ಮಿಕವಾಗಿ)"ಬೇರೆಯವರ ಜಗಳದಲ್ಲಿ ನಡುವೆ ಬರುವುದು ಒಳ್ಳೆಯದಲ್ಲ" ಎಂಬ ಮಾತು ಸುಳ್ಳಲ್ಲ ಅತ್ತಿಗೆ! ನಮ್ಮಿಬ್ಬರ ನಡುವೆ ಸಂಧಾನಕ್ಕೆ ಬಂದು ನೀನೇ ಈಗ ವಂಚಿತಳಾಗಬೇಕಾಯಿತು ನೋಡು.

ರಾ: ಎಲೌ ಕಲ್ಯಾಣಿ! ನಿನ್ನೆಲ್ಲಾ ಮಾತುಗಳೂ ಸತ್ಯವೇ ಇರಬೇ ಕೆಂದು ನಿನ್ನ ಆಕೃತಿಯೇ ಹೇಳುತ್ತಿದೆ ನಿಶ್ಚಯವಾಗಿಯೂ ನಿನ್ನಲ್ಲಿ ಅದ್ಭುತ ಗುಣಗಳಿರಬಹುದು. ಆದರೆ ಏನು ಮಾಡಲಿ? ನಾನು ಗೃಹವನ್ನು ತ್ಯಜಿಸಿದರೂ ಸಪತ್ನೀಕನಾಗಿರುವೆನಲ್ಲ? ಆದರೆ ನನ್ನ ಅನುಜನು ವಿವಾಹಿತ ನಾದರೂ ನನಗಾಗಿ ಎಲ್ಲವನ್ನೂ ತ್ಯಜಿಸಿ ಇಲ್ಲಿ ಬಂದಿರುವನು. ಅಲ್ಲದೆ

ಇವನ ಮೇಲೆ ಮೊದಲೇ ನೀನು ಅನುರಕ್ತಳಾಗಿರುವೆ.... ಯಾವುದೇ ಆಗಲಿ, ತೊಡಗಿದ ಕಾರ್ಯವನ್ನು ಪೂರ್ಣಮಾಡುವುದೇ ಸಾಹಸದ ಕುರುಹಲ್ಲವೇ? ಆದ್ದರಿಂದ ನೀನು ಇವನನ್ನೇ ವರಿಸಿ ಕೃತಕೃತ್ಯಳೆನಿಸು.

(ಶೂರ್ಪಣಖೆ ಭೇದಕ ದೃಷ್ಟಿಯಿಂದ ಲಕ್ಷ್ಮಣನ ಕಡೆ ನೋಡುತ್ತಾಳೆ. ಅವನು ತುಟಿಯಲ್ಲಿಟ್ಟ ಬೆರಳಿನಿಂದ ಅವಳ ಕೇಳಿಕೆಯನ್ನು ಅಲ್ಲಗಳೆಯುತ್ತಾನೆ.)

ಲ: ಎಲೌ ಮಾನಿನಿ! ಅಣ್ಣನ ಮೇಲೆ ಅನುರಕ್ತಳಾದುದರಿಂದ ನೀನು ಇಷ್ಟರಲ್ಲಿಯೇ ನನಗೆ ಮಾನ್ಯಳಾದೆ. (ಶೂರ್ಪಣಖೆ ನಿರಾಶಳಾಗಿ ರಾಮನ ಕಡೆ ನೋಡುವಳು.)

ರಾಮ: ಏನು ಮಾಡೋಣ? ಈಗ ನೀನು ಎರಡು ಕಡೆಯಿಂದಲೂ ನಿರಾಶಿತಳಾಗಬೇಕಾಯಿತಲ್ಲ! ಏಕೆಂದರೆ ಅನುಜವಧುವಂತೂ ನೀನು ಮೊದಲೇ ಆಗಿರುವೆ!

(ಶೂರ್ಪಣಖೆಯ ಮುಖ ಸಿಟ್ಟಿನಿಂದ ಕೆಂಪೇರುವುದು.)

ಶೂ: (ಸ್ವರವೇರಿಸಿ) ಆದರೆ ಈಗ ನಾನು ಆಶೆಯನ್ನು ಬಿಡಬೇಕೇ? ನಾನಾಗಿಯೇ ಬೆಸೆದಿದ್ದ ಸಂಬಂಧವನ್ನು ನಾನೇ ಮುರಿದು ಹಾಕಬೇಕೇ? ಆದರೆ ಬಲಾತ್ಕಾರದಿಂದಲಾದರೂ ನಿಮ್ಮ ಅನುರಾಗವನ್ನು ಗಳಿಸಿಕೊಳ್ಳುವ ಶಕ್ತಿ ನನ್ನಲ್ಲಿದೆ. ನನ್ನ ಭ್ರುಕುಟಿ-ಕಟಾಕ್ಷಗಳೆದುರು ನಿಮ್ಮ ಬಿಲ್ಲೂ ನಿಲ್ಲಬಲ್ಲುದೇ?

ರಾ: ವೀರ ರಮಣಿ! ನಿನ್ನಲ್ಲಿ ಇಂತಹ ಪ್ರತಾಪವಿರಬಹುದು. ಆದರೆ ಭೀತಿಯಿಂದ ಪ್ರೀತಿ ಮೊಳೆಯುವುದೇ? (ಗಂಭೀರನಾಗುವನು).

ಲ: (ವೀರ ವಾಣಿಯಿಂದ) ನಾರಿಯಾಗಿದ್ದುಕೊಂಡು ನೀನಿಷ್ಟು ಅಹಂಭಾವ ತೋರಿದರೆ ಪುರುಷನೆಂದಿಗೂ ಸಹಿಸಲಾರನು ಎಂಬುದನ್ನು ನೀನು ಮರೆಯದಿರು.

ಶೂ: (ವಿಷಮ ತಂತ್ರಿಯಂತೆ ಗರ್ಜಿಸಿ) ಆದರೇನು, ಅಬಲೆಯರು ಯಾವಾಗಲೂ ಅಬಲೆಯರೇ ಆಗಿರುವರೇ? ತಮ್ಮ ಪ್ರೇಮಭಿಕ್ಷೆಯು ವಿಫಲವಾಗಿ ಅಪಮಾನಿತರಾದಾಗ ಅಬಲೆಯರೂ ಎಷ್ಟು ಸಬಲೆಯರಾಗುವರೆಂಬುದನ್ನು ನೀನರಿಯೆ! ನಮ್ಮ ವಿರೋಧ, ಕ್ರೋಧ, ಪ್ರತಿರೋಧ ಒಂದು ಇನ್ನೊಂದಕ್ಕಿಂತ ಕರಾಲವಾಗಿದೆ. ಕೋಮಲಳಾದ ನಾನು ಎಷ್ಟು ಕಠಿಣ-ಕಠೋರಳಾಗುವೆನೆಂಬುದನ್ನು ನೀನೇ ನೋಡುವೆಯಂತೆ.

(ಸೌಮ್ಯ ಶೂರ್ಪಣಖಿಯ ರೂಪು ಮಾಯವಾಗಿ ಅಲ್ಲಿ ವಿಕರಾಲ ಆಕೃತಿಯೊಂದು ಕಾಣಿಸುವುದು. ಅಣ್ಣ-ತಮ್ಮಂದಿರು ಕ್ಷಣಕಾಲ ಅತ್ತಿತ್ತ ನೋಡಿಕೊಳ್ಳುವರು. ಲಕ್ಷ್ಮಣನು ಸೀತೆಗೆ ಧೈರ್ಯ ಹೇಳುವನು. ರಾಮನ ಮುಗುಳುನಗುವನ್ನು ನೋಡಿ ಆಕೆ ಸಮಾಧಾನಗೊಳ್ಳುವಳು.)

ಲ: ಮಾಯಾವಿನಿ! ಆ ರಮ್ಯ ರೂಪದ ಪರಿಣಾಮ ಇದುವೇ ಏನು? ಇದೇ ರೀತಿ ಜನರನ್ನು ವಂಚಿಸುವುದೇ ನಿನ್ನ ಕಾಯಕವಲ್ಲವೇ? ವಿಕೃತ ವಾದ ನಿನ್ನ ಪ್ರಕೃತದ ರೂಪದಿಂದ ನೀನು ನಮ್ಮನ್ನು ಹೆದರಿಸಲಾರೆ. ಏಕೆಂದರೆ, ಅಬಲೆ ಯಾವ ರೂಪವನ್ನು ಧರಿಸಿದರೂ ಅಬಲೆಯೇ ಅಲ್ಲವೇ? ಅಕಟ! ನಿನ್ನ ಬಾಹ್ಯಸೌಂದರ್ಯದ ಅಂತರ ಈ ರೀತಿ ಇದೆಯೇ? ಇದಕ್ಕೆ ತಕ್ಕ ಪ್ರತಿಫಲವನ್ನು ನೀನು ನನ್ನಿಂದ ಪಡೆಯದಿರಲಾರೆ. ನೀನು ನಾರಿ. ಆದ್ದರಿಂದಲೇ ನಿನ್ನನ್ನು ಕೊಲ್ಲುವುದಿಲ್ಲ. ಇದೋ, ಇನ್ನಾರನ್ನೂ ನೀನು ವಂಚಿಸದಿರುವಂತೆ ನಿನ್ನನ್ನು ವಿಕಲಾಂಗಿಯನ್ನಾಗಿ ಮಾಡುವೆನು. (ಎಂದು ಖಡ್ಗವನ್ನೆಳೆದು ಅವಳ ಕಿವಿ-ಮೂಗುಗಳನ್ನು ಕತ್ತರಿಸುವನು. ಅವಳು ಕುರೂಪಿಯಾಗಿ ನೆತ್ತರು ಸುರಿಸುತ್ತಾ, ಧೂಳೆಬ್ಬಿಸುತ್ತಾ ರೋದನದಿಂದ ಅರಣ್ಯವನ್ನು ನಡುಗಿಸಿ ಭಯಂಕರ ಕತ್ತಲೆಯಂತೆ ಹೊರಟುಹೋಗುವಳು.)

ಸೀ: (ಸ್ವಲ್ಪ ತಡೆದು ನಿಟ್ಟುಸಿರುಗರೆದು) ಇಂದು ಪ್ರಾತಃಕಾಲ ದಲ್ಲಿಯೇ ಅಪಶಕುನವಾಯಿತು! ವಿಧಿಯು ಮಂಗಲವನ್ನುಂಟುಮಾಡಲಿ!

ಲ: (ಆಕೆಯನ್ನು ಸಂತೈಸುತ್ತ) ಆರ್ಯೆ! ನೀವು ನಿಶ್ಶಂಕಿತರಾಗಿರಿ. ಈ ಅನುಚರನಿರುವಾಗ ನಿಮಗಾವ ಹೆದರಿಕೆಯಿದೆ? ವಿಪತ್ತುಗಳನ್ನೇನೂ ನಾವು ಬರಮಾಡುವುದಿಲ್ಲ. ಮತ್ತೇಕೆ ಪ್ರಾಕೃತಿಕ ಪರೀಕ್ಷೆಗಳಾದ ಅವುಗ ಳನ್ನು ಎದುರಿಸುವಲ್ಲಿ ನಾವು ಹೆದರಬೇಕು?

ರಾ: ಇದು ನಿಜ. ಸುಖ-ದುಃಖವೆಂಬುದು ಸಮಯಾಧೀನವಾ ದುದು. ಸುಖದಲ್ಲಿ ಗರ್ವಿತನಾಗುವುದೂ, ದುಃಖದಲ್ಲಿ ದೀನನಾಗುವುದೂ ಧೀರನಾದವನಿಗೆ ಹೇಳಿದುದಲ್ಲ. ಸಂಕಟ ಬರುವ ತನಕ ಅದಕ್ಕೆ ಹೆದರಿ ದರೂ ಅದು ಬಂದಾಗ ಅದರೊಡನೆ ಶೂರನಂತೆ ಹೋರಾಡಲೇಬೇಕು. ನನಗೂ ಒಬ್ಬಂಟಿಗನಾಗಿ ಮಹಾ ಕಷ್ಟಗಳನ್ನೆದುರಿಸಿ ನನ್ನ ಸಹನಾಶಕ್ತಿ ಯನ್ನು ಪರೀಕ್ಷಿಸಬೇಕೆಂದಿದೆ.

ಸೀ: ಇನ್ನೂ ನಿಮಗೆ ಸಹನೆಯನ್ನಳೆಯಬೇಕೇ? ನನಗಾಗಿ ನೀವು ಸಹಿಸಿದ ಕಷ್ಟಗಳಲ್ಲೇ ಅದರ ಪರೀಕ್ಷೆಯಾಗಿಲ್ಲವೇ?

ಲ: ಆರ್ಯೆ! ನಿಮ್ಮ ಈ ಕಿಂಕರನಿಗೆ ಯಾವುದೂ ಅಸಹನೀಯ ವಲ್ಲ. ಹೀಗಿರುವಾಗ ನೀವು ಹೀಗೆ ಹೇಳುವುದು ನನಗೇಕೋ ಅಸಹನೀಯ ವಾಗಿ ತೋರುತ್ತಿದೆ.

ಸೀ: ಇರಲಿ, ಬಿಡು ಈ ಮಾತುಗಳನ್ನು. ಇನ್ನೂ ಆಪತ್ತುಗಳನ್ನು ಸಹಿಸುವ ಇಚ್ಛೆಯನ್ನು ಮಾಡದಿರಿ. ನಮಗೇನೂ ರಾಜ್ಯಸಂಪತ್ತು ಬೇಕಿಲ್ಲ. ಹೀಗೇನೇ ನಮ್ಮ ಜೀವನಧಾರೆ ತಡೆಯಿರದೆ ಹರಿಯುತ್ತಿದ್ದರೆ ಸಾಕು.........ನಾವು ರಾಜ್ಯ, ರಾಜ್ಯಭಂಡಾರ ಎಲ್ಲವನ್ನೂ ತ್ಯಜಿಸಿ ಇಲ್ಲಿ ಬಂದಿಲ್ಲವೇ? ನಮ್ಮ ಈ ಸುಖವನ್ನೂ ವಿಧಿಯು ಸಹಿಸದೇನು?

ಲ: ಆರ್ಯೆ! ವಿಧಿಯ ಮಾತನ್ನು ಹಿರಿಯರೊಡನೆ ಕೇಳಿರಿ. ಏಕೆಂದರೆ ಅವರು ಅದನ್ನು ಒಪ್ಪುತ್ತಿದ್ದಾರೆ. ನಾನೋ— ಪುರುಷಾರ್ಥ ಪಕ್ಷಪಾತಿ. (ಮುಗುಳು ನಗುವನು. ರಾಮನೂ ಹಸನ್ಮುಖನಾಗುವನು.)

ಸೀ: (ನಸುನಕ್ಕು) ಇರಲಿ. ಇರಲಿ. ಪತ್ನಿಯನ್ನೂ ಕೂಡ ಒಟ್ಟಿಗೆ ಕರೆದು ತರಲಿಲ್ಲ. ಇದುವೇ ಅಲ್ಲವೇ ನಿನ್ನ ಪುರುಷಾರ್ಥ? (ಕಣ್ಣು ಗಳು ಪ್ರೀತಿಯಿಂದ ತುಂಬುವುವು. ತುಸು ತಡೆದು) ಲಕ್ಷ್ಮಣಾ! ಏಳು, ಕೊಡವನ್ನೆತ್ತಿಕೋ. ನದಿಗೆ ಹೋಗೋಣ. ಮತ್ತೆ ಪುರುಷಾರ್ಥದ ಮಾತನ್ನಾಡಬಹುದು. ನಾನು ಮೀನುಗಳಿಗೆ ತಿನ್ನಗೊಡುವುದಕ್ಕೆ ಸ್ವಲ್ಪ ಧಾನ್ಯದ ಕಾಳುಗಳನ್ನು ಹಿಡಿದುಕೊಳ್ಳುವೆನು.

(ಲಕ್ಷ್ಮಣನು ಕುಟಿಯ ಒಳಗಿಂದ ಕೊಡವನ್ನು ಹಿಡಿದುಕೊಂಡು ಬರುವನು.)

ರಾ: (ಇಬ್ಬರೂ ಹೊರಟು ನಿಂತಾಗ ಸಂತೋಷದಿಂದ ಗದ್ಗದಿತನಾಗಿ) ಸ್ವಲ್ಪ ಹೊತ್ತು ಅತ್ತಿಗೆ ಮೈದುನಂದಿರು ಇಲ್ಲಿ ನಿಲ್ಲಿರಿ. ನಿಮ್ಮನ್ನು ಕ್ಷಣಕಾಲ ನೋಡಿ ನನ್ನ ಬೆಂದ ಹೃದಯವನ್ನು ಒಂದಿಷ್ಟು ಶೀತಲಗೊಳಿಸುವೆನು.

(ಹೊರಟ ಸೀತಾ-ಲಕ್ಷ್ಮಣರು ಅಲ್ಲೇ ತಡೆದು ನಿಲ್ಲುವರು. ರಾಮನು ಹೂ ತುಂಬಿದ ಸಸಿಯೊಂದನ್ನಲುಗಾಡಿಸಿ ಅವರ ಮೇಲೆ ಪುಷ್ಪವೃಷ್ಟಿ ಗರೆಯುವನು.)

(ತೆರೆ ಬೀಳುವುದು.)

೩೨ ವೀರಾಗ್ರಣಿ ಕರ್ಣ	(ಪೌರಾಣಿಕ)	ಶ್ರೀ॥ ಅಮ್ಮೆಂಬಳ ಅನಂತಯ್ಯ ನಾವಡ.
೩೩ ಕುಶ-ಲವ	,,	ಶ್ರೀ॥ ಬಿ. ಈಶ್ವರಯ್ಯ.
೩೪ ಅಕ್ಷಯಪಾತ್ರೆ	(ಸಾಮಾಜಿಕ)	ಶ್ರೀ॥ ಟಿ. ಚಂದ್ರರಾಜ ಸೆಟ್ಟಿ
೩೫ ವೈರಾಗ್ಯಸಿದ್ಧಿ	(ತರಂಗರೂಪಕ)	ಶ್ರೀ॥ ಕೆ. ಎಸ್. ಶರ್ಮ, ವಿದ್ವಾನ್.
೩೬ ಭರತನ ಬಂಧುಪ್ರೇಮ	(ಪೌರಾಣಿಕ)	ಶ್ರೀ॥ ಅಮ್ಮೆಂಬಳ ಅನಂತಯ್ಯ ನಾವಡ.
೩೭ ಮಹಾತ್ಮಾ ಉದಂಕ	(,,)	ಶ್ರೀ॥ ಮಣೆಲ 'ಶಿವಶಂಕರ', ಪುಣಚಾ.
೩೮ ಭಕ್ತ ಪ್ರಹ್ಲಾದ	(,,)	ಶ್ರೀ॥ ಎ. ವಿ. ಮಯ್ಯ.
೩೯ ಅಭಿಮನ್ಯು	,,	ಶ್ರೀ॥ ಬಿ. ಈಶ್ವರಯ್ಯ.
೪೦ ವಿಷಬೀಜ	,,	ಶ್ರೀ॥ ಕೆ. ಗೋವಿಂದ ಭಟ್ಟ.
೪೧ ಬಲಿ ಬಂಧನ	,,	ಶ್ರೀ॥ ಎಸ್. ತಿರುಮಲೇಶ್ವರ ಭಟ್.
೪೨ ಶಕುಂತಲಾ	,,	ಶ್ರೀ॥ ಬಿ. ಈಶ್ವರಯ್ಯ.
೪೩ ರುಕ್ಮಾಂಗದ	,,	ಶ್ರೀ॥ ಅಂಬಾತನಯ, ಮುದ್ರಾಡಿ.
೪೪ ಸತ್ಯಭಾಮಾ ಗರ್ವಭಂಗ	,,	ಶ್ರೀ॥ ಸಿ. ಗೋಪಾಲಕೃಷ್ಣಾಚಾರ್ಯ.
೪೫ ಶರಸೇತು	,,	ಶ್ರೀ॥ ನಾರಾಯಣ.
೪೬ ದೀಪಾವಳಿ	(ಸಾಮಾಜಿಕ)	ದಿ॥ ಕುಡ್ಪಿ ಚಂದ್ರಕಾಂತ ಶೆಣೈ.
೪೭ ಶಂಭುಕವಧೆ	(ಪೌರಾಣಿಕ)	ಶ್ರೀ॥ ವೀ. ದೀ. ಮಧುರಂ.
೪೮ ರಾಜಾ ಭರ್ತೃಹರಿ	,,	'ರಸಿಕ', ಪುತ್ತಿಗೆ.
೪೯ ಶರಶಯ್ಯೆ (ರೇಡಿಯೊ)	,,	ಶ್ರೀ॥ ಬಿ. ವಿ. ಶೆಣೈ.
೫೦ ಕನಕದಾಸರು	(ಐತಿಹಾಸಿಕ)	ಶ್ರೀ॥ ಬಿ ಪದ್ಮನಾಭ ಸೋಮಯಾಜಿ.
೫೧ ರಾಮರಾಜ್ಯದ ಮಡಿವಾಳ	(ಪೌರಾಣಿಕ)	ಶ್ರೀ॥ ಡಿ. ಮಹಾಲಿಂಗ ಭಟ್ಟ.
೫೨ ಭಸ್ಮಾಸುರ ಮೋಹಿನಿ	,,	ಶ್ರೀ॥ ಸಿ. ಗೋಪಾಲಕೃಷ್ಣಾಚಾರ್ಯ.
೫೩ ಗೋಪಾಲನ ಸ್ವಾಮ್ಯ		ಶ್ರೀ॥ ಪಡಾರು ಮಹಾಬಲೇಶ್ವರ ಭಟ್ಟ.
೫೪ ನರವೀರ ನೃಪತುಂಗ		ಶ್ರೀ॥ ಉಡುಪಿ ಶ್ರೀನಿವಾಸರಾವ್.
೫೫ ಫಲೋದಯ	(ಪೌರಾಣಿಕ)	ವಿದ್ವಾನ್ ಎಂ. ಗೋಪಾಲಕೃಷ್ಣ ಭಟ್ಟ.
೫೬ ಮಾಯಾವಿನಿ	,,	,, ,,

ಒಂದಾಣೆ ಮಾಲೆ, ಪ್ರಭಾತ ಆಫೀಸು,

ರಥಬೀದಿ, ಮಂಗಳೂರು-೧.

Edited, Printed & Published by K. V. Shenoy
at the Prabhat Printers, Ltd., Mangalore.